## ೩೦.೦೫.೨೦೧೫ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) ೨೬ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೨೬ನೇ ಸಭೆ**ಯು ಮಾನ್ಯ ಪ್ರಭಾರಿ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಮೇ ೩೦, ೨೦೧೫ರ ಶನಿವಾರ ಮಧ್ಯಾಹ್ನ ೨.೩೦** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಶ್ರೀನಿವಾಸ ವರಖೇಡಿ,** ಮಾನ್ಯ ಕುಲಪತಿಗಳು (ಪ್ರ) | ಅಧ್ಯಕ್ಷರು |
| ೨. | **ಶ್ರೀ ಕೆ. ಭೀಮಪ್ಪ,** ನಿವೃತ್ತ ಶಿಕ್ಷಣಾಧಿಕಾರಿಗಳು, ಚಿತ್ರದುರ್ಗ | ಸದಸ್ಯರು |
| ೩. | **ಶ್ರೀ ಪರಪ್ಪ ಬಸಪ್ಪ ಬಾವಲತ್ತಿ,** ನಿವೃತ್ತ ಅಧ್ಯಾಪಕರು, ರಾಮಪುರ, ರಬಕವಿ | ಸದಸ್ಯರು |
| ೪. | **ಡಾ. ಮೈಕೆಲ್,** ಪ್ರಾಧ್ಯಾಪಕರು ಮತ್ತು ಡೀನ್, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ಸದಸ್ಯರು |
| ೫. | **ಶ್ರೀಮತಿ ಜಯಶ್ರೀ ವಿ. ಕೊರತಿ,** ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| ೬. | **ವಿದ್ವಾನ್ ಸಿದ್ಧಮಲ್ಲ ಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಮೈಸೂರು | ಸದಸ್ಯರು |
| ೭. | **ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ,** ನಿವೃತ್ತ ಪ್ರಾಚಾರ್ಯರು, ಉಮ್ಮಚಗಿ | ಸದಸ್ಯರು |
| ೮. | **ಪ್ರೊ. ಕೆ.ಇ. ರಾಧಾಕೃಷ್ಣ,** ಶಿಕ್ಷಣತಜ್ಞರು, ಬೆಂಗಳೂರು | ಸದಸ್ಯರು |
| ೯. | **ಡಾ. ವನಿತಾ ರಾಮಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು | ಸದಸ್ಯರು |
| ೧೦. | **ಡಾ. ಎಮ್.ಕೆ. ಶ್ರೀಧರ್,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು–09 | ಸದಸ್ಯರು |
| ೫. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೬. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೭. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 | ಸದಸ್ಯರು |
| ೮. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001 | ಸದಸ್ಯರು |
| ೯. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು–560012 | ಸದಸ್ಯರು |
| ೧೦. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009 | ಸದಸ್ಯರು |
| ೧೧. | **ಆಯುಕ್ತರು,** ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| ಕ್ರ.ಸಂ. | ವಿಷಯ ಮತ್ತು ಟಿಪ್ಪಣಿ | ನಿರ್ಣಯ |
|---|---|---|
| ವಿಷಯ 01 | **ಪ್ರಶಾಸನ ಸಮಿತಿ 24 ಮತ್ತು 25ನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 24ನೇ ಸಭೆಯು ದಿನಾಂಕ: 22.12.2014ರಂದು ಮತ್ತು ಪ್ರಶಾಸನ ಸಮಿತಿ 25ನೇ ಸಭೆಯು ದಿನಾಂಕ: 18.03.2015ರಂದು ಮಾನ್ಯ ಪ್ರಭಾರಿ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಗಳಲ್ಲಿ ಚರ್ಚಿತವಾಗಿ ನಿರ್ಣಯಗೊಂಡ ವಿಷಯಗಳ ಅನುಪಾಲನಾ ವರದಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | **ಪ್ರಶಾಸನ ಸಮಿತಿ 24 ಮತ್ತು 25ನೇ ಸಭೆಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿದ ಸಭೆಯು ತನ್ನ ಅನುಮೋದನೆಯನ್ನು ನೀಡಿತು.** |
| ವಿಷಯ 02 | **ಪ್ರಶಿಕ್ಷಣ ಪರಿಷತ್ತಿನ ನಡಾವಳಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 25ನೇ ಸಭೆಯು ದಿನಾಂಕ: 18.03.2015ರಂದು ನಡೆಯಿತು. ಪ್ರಶಾಸನ ಸಮಿತಿಗೆ ಸರ್ಕಾರದಿಂದ ನಾಮನಿರ್ದೇಶನಗೊಂಡ ನೂತನ ಸದಸ್ಯರ ಪ್ರಥಮ ಸಭೆ ಅದಾಗಿತ್ತು. ಹೀಗಾಗಿ, ಮೊದಲಿಗೆ ಸಭೆಯ ಕಾರ್ಯಸೂಚಿ ಪತ್ರದ 12 ವಿಷಯಗಳನ್ನು ತೆಗೆದುಕೊಂಡಿದ್ದರಿಂದ, ದಿನಾಂಕ: 09.03.2015ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ | **ಸಭೆಯು ಪ್ರಶಿಕ್ಷಣ ಪರಿಷತ್ತಿನ 14ನೇ ಸಭೆಯ ನಡಾವಳಿಯನ್ನು ಪರಿಶೀಲಿಸಿ ತನ್ನ ಅನುಮೋದನೆಯನ್ನು ನೀಡಿತು.**<br><br>**ಈ ಕೆಳಕಂಡ ವಿಷಯಗಳಲ್ಲಿ ಚರ್ಚಿಸಿ** |

| | | |
|---|---|---|
| | 14ನೇ ಸಭೆಯ ನಡಾವಳಿಯನ್ನು ಅನುಮೋದಿಸಲು ಸಮಯವಾಗಲಿಲ್ಲ. ಆದ್ದರಿಂದ ಅಧ್ಯಕ್ಷರು ಮುಂದಿನ ಪ್ರಶಾಸನ ಸಭೆಯಲ್ಲಿ ಅನುಮೋದನೆ ಪಡೆಯಲು ಸೂಚಿಸಿದ್ದರಿಂದ ಸಭೆಯ ಮುಂದೆ ಮಂಡಿಸಿದೆ. | ತನ್ನ ಅಭಿಪ್ರಾಯವನ್ನು ಸೂಚಿಸಿತು.<br>ವಿಷಯ 9: ಬಿ.ಎ. (ವಿದ್ವನ್ಮಧ್ಯಮಾ) ಮತ್ತು ಎಂ.ಎ. (ವಿದ್ವದುತ್ತಮಾ) ಪದವಿಗಳ ಪುನಃನಾಮಕರಣದ ಬಗೆಗೆ ಪ್ರಶಿಕ್ಷಣ ಪರಿಷತ್ತಿನ ನಿರ್ಣಯವನ್ನು ಮತ್ತು ಇತರ ಸಾಧಕ–ಬಾಧಕಗಳನ್ನು ಚರ್ಚಿಸಿ ಈ ಬಗೆಗೆ ಒಂದು ಪರಿನಿಯಮವನ್ನು ರಚಿಸಿ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ನಂತರ ಅನುಷ್ಠಾನಕ್ಕೆ ತರಬೇಕೆಂದು ಸದಸ್ಯರು ಸೂಚಿಸಿದರು. ಪ್ರಶಿಕ್ಷಣ ಪರಿಷತ್ತಿನ ನಿರ್ಣಯಕ್ಕೆ ಅನುಮೋದನೆಯನ್ನು ನೀಡಲಾಯಿತು.<br>ವಿಷಯ 10: ಈ ಸಂಬಂಧವಾಗಿ ಚರ್ಚಿಸಿ ಈ ಉದ್ದೇಶಕ್ಕಾಗಿ ರಚಿತವಾದ ಉಪಸಮಿತಿಯ ಸಲಹೆಯನ್ನು ಪಡೆದು ಕ್ರಮವಹಿಸಲು ಸೂಚಿಸಲಾಯಿತು.<br>ವಿಷಯ 11: ಈ ಪ್ರಸ್ತಾವನೆಯನ್ನು ಸುದೀರ್ಘವಾಗಿ ಚರ್ಚಿಸಿ ಅನುಮೋದನೆಯನ್ನು ನೀಡಿತು.<br>ವಿಷಯ 22: ವಿಶ್ವವಿದ್ಯಾಲಯದಲ್ಲಿ 2016–17ನೇ ಶೈಕ್ಷಣಿಕ ಸಾಲಿನಿಂದ ಆರಂಭಿಸಲು ಉದ್ದೇಶಿತವಾದ CBCSನ ಅನುಷ್ಠಾನಕ್ಕಾಗಿ ರಚಿಸಿದ ಉಪಸಮಿತಿಯ ಸಭೆಗಳನ್ನು ನಡೆಸಿ ಸಲಹೆ ಪಡೆದು ಮಂಡಿಸಲು ಸೂಚಿಸಲಾಯಿತು.<br>ವಿಷಯ 24: ಈ ನಿರ್ಣಯದಲ್ಲಿ ಶಿಕ್ಷಕರಿಗೆ ಕೇವಲ ಪ್ರಶಂಸಾಪತ್ರ ನೀಡಬಹುದೆಂದೂ, ನಗದುರೂಪದ ಬಹುಮಾನವನ್ನು ನೀಡಬಾರದೆಂದೂ ಬದಲಾವಣೆಯನ್ನು ಸೂಚಿಸಲಾಯಿತು. ಉಳಿದಂತೆ ನಿರ್ಣಯಕ್ಕೆ ಒಪ್ಪಿಗೆ ನೀಡಲಾಯಿತು.<br>ವಿಷಯ 29: ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗೆ ಯುಜಿಸಿ/ ಸರ್ಕಾರಿ ನಿಯಮಾನುಸಾರ ವಿಚಾರ ಸಂಕಿರಣ/ಗೋಷ್ಠಿ/ ಕಾರ್ಯಾಗಾರಗಳಲ್ಲಿ ಭಾಗವಹಿಸುವುದಕ್ಕಾಗಿ ಸಹಾಯಾನುದಾನ ನೀಡುವ ಬಗ್ಗೆ ತನ್ನ ಒಪ್ಪಿಗೆಯನ್ನು ಸೂಚಿಸಿತು. ಈ ವರ್ಷದ 2015–16ನೇ ಸಾಲಿನ ಆರ್ಥಿಕ ವರ್ಷದಿಂದಲೇ ಅನುಷ್ಠಾನಗೊಳಿಸಲು ಸೂಚಿಸಲಾಯಿತು.<br>ವಿಷಯ 30: ಈ ಶಿಕ್ಷಣ ಸಾಮಗ್ರಿಯನ್ನು ನಿರ್ಮಿಸುವ ಪ್ರಸ್ತಾವನೆಗೆ ಒಪ್ಪಿಗೆ ನೀಡಿದೆ. ಇಂತಹ ಕಾರ್ಯಯೋಜನೆಗಳನ್ನು ಹೆಚ್ಚಿಸಬೇಕೆಂದು ಸದಸ್ಯರು ಸೂಚಿಸಿದರು.<br><br>ಉಳಿದಂತೆ ಎಲ್ಲ ನಿರ್ಣಯಗಳಿಗೆ ಸಭೆಯು ತನ್ನ ಸಹಾನುಮತಿಯನ್ನು ಸೂಚಿಸಿ ಅನುಸಮರ್ಥನೆ ನೀಡಿತು. |

| | | |
|---|---|---|
| ವಿಷಯ 03 | **ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**<br>ಹಣಕಾಸು ಸಮಿತಿಯ ಹದಿನಾರನೆಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 29.05.2015ರಂದು ನಡೆಯಿತು. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | **ಹಣಕಾಸು ಸಮಿತಿ 16ನೇ ಸಭೆಯ ನಡಾವಳಿಯ ವಿವರಗಳನ್ನು ಪರಿಶೀಲಿಸಿ, ಸಭೆಯು ಅನುಮೋದನೆಯನ್ನು ನೀಡಿತು.** |
| ವಿಷಯ 04 | **ವಿಶ್ವವಿದ್ಯಾಲಯದ ಕಛೇರಿಗೆ ಸರ್ವರ್ ಖರೀದಿಸುವುದನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಮತ್ತು ಉನ್ನತ ಶಿಕ್ಷಣ ಇಲಾಖೆಯ ಬರುವ ಶೈಕ್ಷಣಿಕ ವರ್ಷದಿಂದ ವಿಶ್ವವಿದ್ಯಾಲಯ ಮತ್ತು ಅದರ ಅಧೀನದಲ್ಲಿ ಬರುವ ಘಟಕ ಕಾಲೇಜುಗಳು, ಅನುದಾನಿತ ಹಾಗೂ ಅನುದಾನರಹಿತ ಕಾಲೇಜುಗಳಿಗೆ ಸಂಬಂಧಿಸಿದ ಎಲ್ಲ ಮಾಹಿತಿಗಳನ್ನು ICT ವಿಧಾನದಲ್ಲಿ ಅಳವಡಿಸಬೇಕೆಂದು ಆದೇಶಿಸಿರುವುದರಿಂದ, ಈ ಕೆಲಸಗಳನ್ನು ನಿರ್ವಹಿಸಲು ಒಂದು ಕಂಪ್ಯೂಟರ್ ಸರ್ವರ್‌ನ ಅಗತ್ಯವಿದೆ. ಕರ್ನಾಟಕ ಸರ್ಕಾರದ ಸೂಚನೆಯಂತೆ, DGS&D ದರದಲ್ಲಿ ಅಥವಾ ಕಿಯೋನಿಕ್ಸ್ ದರಪಟ್ಟಿಯಂತೆ ಒಂದು ಕಂಪ್ಯೂಟರ್ ಸರ್ವರ್ ಹಾಗೂ ಅದಕ್ಕೆ ಆವಶ್ಯಕವಾದ ಯು.ಪಿ.ಎಸ್. ಮತ್ತು ಪೀಠೋಪಕರಣಗಳನ್ನು (**ಅಂದಾಜು ವೆಚ್ಚ ರೂ. 99,000/–**ಗಳು) ಖರೀದಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. ಅಲ್ಲದೇ, ಇದಕ್ಕೆ ಸಂಬಂಧಿಸಿದ ಇತರ ಪರಿಕರಗಳನ್ನು ನಿಯಮಾನುಸಾರ ಖರೀದಿಸಲು ಮತ್ತು ಸೇವೆಯನ್ನು ಬಳಸಿಕೊಳ್ಳಲು ಅನುಮೋದನೆ ಕೋರಿದೆ. | **ನಿಯಮಾನುಸಾರ DGS&D ಅಥವಾ ಕಿಯೋನಿಕ್ಸ್ (ಸರಕಾರಿ ಸ್ವಾಮ್ಯದ ಸಂಸ್ಥೆ) ದರಪಟ್ಟಿಯಂತೆ ವಿಶ್ವವಿದ್ಯಾಲಯದ ಕಛೇರಿಗೆ ಸರ್ವರ್ ಮತ್ತಿತರ ಪರಿಕರಗಳನ್ನು ಖರೀದಿಸುವುದಕ್ಕೆ ಸಭೆಯು ಅನುಮೋದನೆ ನೀಡಿತು.** |
| ವಿಷಯ 05 | **ಸರ್ಕಾರದ ಆದೇಶದ ಮೇರೆಗೆ ವಿಶ್ವವಿದ್ಯಾಲಯದಲ್ಲಿ ಮಾಹಿತಿ ತಂತ್ರಜ್ಞಾನ ಬಳಕೆಯ ಅನುಷ್ಠಾನದ ಬಗೆಗೆ.**<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಮತ್ತು ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ನಿರ್ದೇಶನದಂತೆ, ನಮ್ಮ ವಿಶ್ವವಿದ್ಯಾಲಯದಲ್ಲಿ **ಮಾಹಿತಿ ತಂತ್ರಜ್ಞಾನ ಕೋಶ(IT Cell)**ವನ್ನು ಪ್ರಾರಂಭಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದರ ಅಡಿಯಲ್ಲಿ ಹಲವಾರು ಕಂಪ್ಯೂಟರ್‌ಸಂಬಂಧೀ ನಿರ್ವಹಣಾ ವ್ಯವಸ್ಥೆಗಳನ್ನು ಜಾರಿಗೊಳಿಸಬೇಕಾಗಿದೆ. ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ, ಈ ಕಾರ್ಯಕ್ಕಾಗಿ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಪರಿತೋಷ್‌ದಾಸ್ ಅವರನ್ನು ನೋಡಲ್ ಅಧಿಕಾರಿಯನ್ನಾಗಿ ಹಾಗೂ ಯೋಜನಾ ಸಹಾಯಕರಾದ ವಿದ್ವಾನ್ ಉದಯನ ಹೆಗಡೆ ಅವರನ್ನು ಸಂಯೋಜಕರನ್ನಾಗಿ ನಿಯೋಜಿಸಲಾಗಿದ್ದು, ಈ ಕಾರ್ಯದ ನಿರ್ವಹಣೆಗಾಗಿ ರೂ. 15.00 ಲಕ್ಷಗಳ ಮೊತ್ತವನ್ನು ಈ ವರ್ಷದ ಕ್ರಿಯಾಯೋಜನೆಯಲ್ಲಿ ತೆಗೆದಿರಿಸಲಾಗಿದೆ ಮತ್ತು ಈ ಕಾರ್ಯಕ್ಕಾಗಿ ಒಬ್ಬ ತಂತ್ರಜ್ಞ ಹಾಗೂ ಒಬ್ಬ ಡಾಟಾ ಎಂಟ್ರಿ ಆಪರೇಟರ್ ಸಿಬ್ಬಂದಿಗಳನ್ನು ಸಂಚಿತ ವೇತನದಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಿಸಬೇಕಾಗುತ್ತದೆ. ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. | **ಕಿಯೋನಿಕ್ಸ್ ಸಂಸ್ಥೆಯ ದರಪಟ್ಟಿಗೆ ಹೆಚ್ಚಾಗದಂತೆ ಗಣಕಯಂತ್ರ ತಂತ್ರಜ್ಞ / ಡಾಟಾ ಎಂಟ್ರಿ ಆಪರೇಟರ್‌ಅನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು.** |
| ವಿಷಯ 06 | **ವಿಶ್ವವಿದ್ಯಾಲಯದ ಪರೀಕ್ಷಾ ಚಟುವಟಿಕೆಗಳಿಗಾಗಿ ನಡೆಸಿದ ಒಪ್ಪಂದವನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಮತ್ತು ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಸೂಚನೆಯಂತೆ, ವಿಶ್ವವಿದ್ಯಾಲಯದ ಸಮಗ್ರ ಶೈಕ್ಷಣಿಕ ಚಟುವಟಿಕೆಗಳನ್ನು ಕಂಪ್ಯೂಟರ್ ನಿರ್ವಹಣಾ ಅಡಿಯಲ್ಲಿ ವ್ಯವಸ್ಥೆಗೊಳಿಸಬೇಕಾದ ಹಿನ್ನೆಲೆಯಲ್ಲಿ, 2014–15ನೇ ಸಾಲಿನ ಪರೀಕ್ಷಾ ನಿರ್ವಹಣೆ, ಫಲಿತಾಂಶ ಘೋಷಣೆ ಮತ್ತು ಅಂಕಪಟ್ಟಿ ವಿತರಣೆಯ ಸಂಪೂರ್ಣ ಜವಾಬ್ದಾರಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಮೆ॥ ಮೆಹ್ರಾ ಫಾರಂಸ್ ಎನ್ನುವವರಿಗೆ ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ನೀಡಲಾಗಿತ್ತು. ಈ ಪರೀಕ್ಷಾಸಂಬಂಧಿ ಒಟ್ಟು ಖರ್ಚು **ರೂ. 13,55,437/–** (ಸ್ನಾತಕ–ಸ್ನಾತಕೋತ್ತರ ಪರೀಕ್ಷೆಗಳು: ರೂ. 11,96,488/– ಮತ್ತು ಸರ್ಟಿಫಿಕೇಟ್–ಡಿಪ್ಲೋಮಾ ಪರೀಕ್ಷೆಗಳು: ರೂ. 1,58,949/–) ಲಕ್ಷ ರೂಪಾಯಿಗಳಾಗಿದ್ದು, ಈ ಮೊತ್ತಕ್ಕೆ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. ಹಾಗೆಯೇ ಮುಂದಿನ ವರ್ಷವೂ ಇದೇ ಸಂಸ್ಥೆಯ ಜೊತೆಗೆ ಒಪ್ಪಂದ ಮಾಡಿಕೊಳ್ಳುವ ಸಂಬಂಧ ಒಂದು ಉಪಸಮಿತಿಯನ್ನು ರಚಿಸಿ ಶಿಫಾರಸ್ಸು ಪಡೆಯಲಾಗಿದೆ. ಈ ಅಂಶವನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. | **2014–15ನೇ ಸಾಲಿನ ಪರೀಕ್ಷಾ ಕಾರ್ಯಗಳನ್ನು ಮೆ॥ ಮೆಹ್ರಾ ಫಾರಂಸ್ ಅವರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಹಾಗೂ ತಗುಲಿದ ವೆಚ್ಚಗಳಿಗೆ ಸಭೆಯು ಅನುಮೋದನೆಯನ್ನು ನೀಡಿತು.**<br><br>**ಬೇರೆ ವಿಶ್ವವಿದ್ಯಾಲಯಗಳಲ್ಲಿ ಈ ಸಂಬಂಧ ಯಾವ ಕ್ರಮದಲ್ಲಿ (ಇ–ಟೆಂಡರ್ ಮೂಲಕ ಅಥವಾ ಬೇರೆ ವಿಧಾನದಲ್ಲಿ) ಆದೇಶ ನೀಡುತ್ತಿದ್ದಾರೆಂಬುದು ಗಮನಿಸಿ, ಭವಿಷ್ಯದಲ್ಲಿ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದೆಂದು ನಿರ್ಣಯಿಸಿತು.** |
| ವಿಷಯ 07 | **ಪ್ರಸಾರಾಂಗ ಸಲಹಾ ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಸಾರಾಂಗ ಸಲಹಾ ಸಮಿತಿ ಸಭೆಯು ದಿನಾಂಕ: 06.05.2015ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯಲ್ಲಿ ಪ್ರಕಟಣೆಗಳಿಗೆ ಸಂಬಂಧಿಸಿದ | **ಸಭೆಯು ಪ್ರಸಾರಾಂಗ ಸಲಹಾ ಸಮಿತಿ ಸಭೆಯ ನಡಾವಳಿಯ ವಿವರಗಳನ್ನು ಪರಿಶೀಲಿಸಿ, ಅನುಮೋದನೆಯನ್ನು ನೀಡಿತು.** |

| | | |
|---|---|---|
| | ಹಲವು ವಿಷಯಗಳು ಚರ್ಚಿತವಾಗಿ ನಿರ್ಣಯಗೊಂಡವು. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | |
| ವಿಷಯ 08 | **ವಿಶ್ವವಿದ್ಯಾಲಯದ ಎಲ್ಲ ಸಿಬ್ಬಂದಿಗಳಿಗೆ ಎಸ್.ಬಿ.ಐ. ವೈದ್ಯಕೀಯ ವಿಮೆಯನ್ನು ಒದಗಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಲ್ಲ ಸಿಬ್ಬಂದಿಗಳು ಹಾಗೂ ಸಿಬ್ಬಂದಿಗಳ ಅವಲಂಬಿತರಿಗೆ (ತಂದೆ–ತಾಯಿ; ಪತಿ/ಪತ್ನಿ ಹಾಗೂ ಮಕ್ಕಳು) ಆರೋಗ್ಯ ವಿಮೆಯನ್ನು ಅಳವಡಿಸಲು ಎಸ್.ಬಿ.ಐ. ಜನರಲ್ ಇನ್ಶೂರೆನ್ಸ್ ಸಂಸ್ಥೆಯಿಂದ ದರಪಟ್ಟಿಯನ್ನು ಪಡೆಯಲಾಗಿದ್ದು, **ಒಂದು ವರ್ಷಕ್ಕೆ ರೂ. 6,16,015/–** ಸೂಚಿಸಿರುತ್ತಾರೆ.[ಒಬ್ಬ ಸಿಬ್ಬಂದಿಯ ಪಾಲಿಸಿ ಮೊತ್ತ ರೂ. 5.00 ಲಕ್ಷಗಳು (ಅವಲಂಬಿತರು ಸೇರಿ)] ಎಸ್.ಬಿ.ಐ. ಸಂಸ್ಥೆಯಿಂದ ಆರೋಗ್ಯವಿಮಾ ಸೌಲಭ್ಯವನ್ನು ನೀಡಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. ಇದು ಮುಂದಿನ ಹತ್ತು ವರ್ಷಗಳವರೆಗೆ ಮುಂದುವರೆಯುತ್ತದೆ. | **ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಎಸ್.ಬಿ.ಐ. ಸಂಸ್ಥೆಯಿಂದ ವೈದ್ಯಕೀಯ ವಿಮೆಯನ್ನು ಒದಗಿಸಲು ಸಭೆಯು ಅನುಮೋದನೆಯನ್ನು ನೀಡಿತು. ಆಸ್ಪತ್ರೆಗೆ ದಾಖಲಾಗದ ಸಂದರ್ಭದಲ್ಲಿ ಔಷಧಿ, ಇತ್ಯಾದಿಗಳಿಗಾಗಿ ಸಿಬ್ಬಂದಿಗೆ ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ವರ್ಷಕ್ಕೆ ಗರಿಷ್ಠ ರೂ. 12,000/– ಪಾವತಿಸಲು ಸಭೆಯು ಒಪ್ಪಿಗೆ ನೀಡಿತು.** |
| ವಿಷಯ 09 | **ಘಟಕ ಕಾಲೇಜುಗಳ ಪರಿನಿಯಮ ಹಾಗೂ ಪ್ರಾಚಾರ್ಯರ ಅರ್ಹತೆಯ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಮತ್ತು ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು –ಈ ಎರಡೂ ಕಾಲೇಜುಗಳ ಸಿಬ್ಬಂದಿಗಳ ವಿಲೀನೀಕರಣ ಪ್ರಕ್ರಿಯೆ ಹಾಗೂ ಪ್ರಾಚಾರ್ಯರ ಅರ್ಹತೆಯ ಬಗೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯವು ಒಂದು ಪರಿನಿಯಮ ಸಮಿತಿಯನ್ನು ರಚಿಸಿತ್ತು. ಆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಸಭೆಗಳನ್ನು ನಡೆಸಿ, ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ: ಇಡಿ 102 ಯುಎನ್ಇ 2014; ದಿನಾಂಕ: 19.05.2015ರ ಸೂಚನೆಯಂತೆ ಪರಿಷ್ಕೃತ ಪರಿನಿಯಮವನ್ನು ರಚಿಸಿದ್ದು, ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | **ಘಟಕ ಕಾಲೇಜುಗಳ ಸಿಬ್ಬಂದಿಗಳ ವಿಲೀನೀಕರಣ ಬಗೆಗಿನ ಪರಿಷ್ಕೃತ ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದಿಂದ ಅನುಮೋದನೆ ಪಡೆಯಲು ಸಭೆಯು ಒಪ್ಪಿಗೆಯನ್ನು ನೀಡಿತು.**<br>**ಘಟಕ ಕಾಲೇಜುಗಳ ಪ್ರಾಚಾರ್ಯರ ನೇಮಕಾತಿ ಅರ್ಹತೆಯ ಬಗ್ಗೆ ಸಮಿತಿಯು ನೀಡಿದ ಪರಿನಿಯಮವನ್ನು ಸಭೆಯು ಅನುಮೋದಿಸಿತು.** |
| ವಿಷಯ 10 | **ವಿಶ್ವವಿದ್ಯಾಲಯದಲ್ಲಿ ಶಿಕ್ಷಾ ನಿಕಾಯವನ್ನು ಪ್ರಾರಂಭಿಸುವ ಬಗೆಗೆ.**<br>ವಿಶ್ವವಿದ್ಯಾಲಯದಲ್ಲಿ ಹಲವು ವಿಭಾಗದ ತರಗತಿಗಳು ಯಶಸ್ವಿಯಾಗಿ ನಡೆಯುತ್ತಿರುವ ಹಿನ್ನೆಲೆಯಲ್ಲಿ, 2015–16ನೇ ಸಾಲಿನಿಂದ ಅನ್ವಯವಾಗುವಂತೆ ಶಿಕ್ಷಾ ನಿಕಾಯವನ್ನು (ಬಿ.ಎಡ್) ಶಿಕ್ಷಣ ವಿಭಾಗವನ್ನು ತೆರೆಯಬಹುದಾಗಿದೆ. ನಮ್ಮ ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳಲ್ಲಿಯೇ ಅನೇಕ ವಿದ್ಯಾರ್ಥಿಗಳು ಸ್ನಾತಕರಾಗುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರಾರಂಭಿಸಬಹುದಾಗಿರುತ್ತದೆ. ಈ ಉದ್ದೇಶಕ್ಕಾಗಿ ನಿಯಮಾವಳಿ ಮತ್ತು ಕಾರ್ಯಯೋಜನೆಯನ್ನು ರೂಪಿಸಲು ಒಂದು ಸಮಿತಿಯನ್ನು ರಚಿಸಲಾಗಿದೆ. ವಿಶ್ವವಿದ್ಯಾಲಯದ ಅಧಿನಿಯಮದಲ್ಲಿ ಇರುವ ಈ ನಿಕಾಯದ ಆರಂಭಕ್ಕೆ ಹಾಗೂ ಅದಕ್ಕಾಗಿ ಬೇಕಾಗುವ ವೆಚ್ಚಕ್ಕೆ ಸಭೆಯ ಅನುಮೋದನೆಯನ್ನು ಕೋರಿದೆ. | **ಈ ಉದ್ದೇಶಕ್ಕಾಗಿ ಪ್ರಶಾಸನ ಸಮಿತಿ ಸದಸ್ಯರಾದ ಶ್ರೀಮತಿ ಜಯಶ್ರೀ ವಿ. ಕೊರತಿ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ಸಲಹೆಯ ಮೇರೆಗೆ ವಿಶ್ವವಿದ್ಯಾಲಯದಲ್ಲಿ ಶಿಕ್ಷಾ ನಿಕಾಯ ಪ್ರಾರಂಭದ ಪ್ರಕ್ರಿಯೆಯನ್ನು ಆರಂಭಿಸಲು ಸಭೆಯು ಅನುಮೋದನೆ ನೀಡಿತು.** |
| ವಿಷಯ 11 | **ವಿಶ್ವವಿದ್ಯಾಲಯವು ಅಧಿಸೂಚನೆ ಹೊರಡಿಸಿರುವ ಮೀಸಲಾತಿ (ಬೋಧಕ–ಬೋಧಕೇತರ) ಹುದ್ದೆಗಳ ನೇಮಕಾತಿ ಹಾಗೂ ಬೋಧಕ ವರ್ಗದವರ ಮುಂಬಡ್ತಿ (ಸಿ.ಎ.ಎಸ್.)ಯನ್ನು ನಡೆಸುವ ಬಗೆಗೆ.**<br>ಉನ್ನತ ಶಿಕ್ಷಣ ಇಲಾಖೆಯ ಸೂಚನೆಯಂತೆ, ವಿಶ್ವವಿದ್ಯಾಲಯವು ಮೀಸಲಾತಿ (ಬೋಧಕ–ಬೋಧಕೇತರ) ಹುದ್ದೆಗಳ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿ, ಅರ್ಜಿಗಳನ್ನು ಆಹ್ವಾನಿಸಿತ್ತು. ಅದರಂತೆ, ಅಭ್ಯರ್ಥಿಗಳಿಂದ ಅರ್ಜಿಗಳು ಬಂದಿವೆ. ಈ ಅರ್ಜಿಗಳ ಪರಿಶೀಲನೆಯು ನಡೆದಿದ್ದು, ಅರ್ಹ ಅಭ್ಯರ್ಥಿಗಳ ಪಟ್ಟಿಯು ಸಿದ್ಧವಾಗಿದೆ. ಮುಂದಿನ ಆಯ್ಕೆ ಪ್ರಕ್ರಿಯೆಯನ್ನು ಆರಂಭಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ.<br>ಯುಜಿಸಿ ಆದೇಶಗಳು ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮಗಳನ್ವಯ, ಎರಡು ವರ್ಷಗಳ ಖಾಯಂಪೂರ್ವ ಸೇವಾವಧಿಯನ್ನು ಪೂರೈಸುವ ಹಾಗೂ ಎಲ್ಲ ಅಗತ್ಯ ಸೇವಾ ಅರ್ಹತೆಗಳನ್ನು ಪಡೆದಿರುವ ಬೋಧಕ ಸಿಬ್ಬಂದಿಗಳಿಗೆ ಮುಂಬಡ್ತಿಯನ್ನು ಯುಜಿಸಿ ನಿಯಮಾವಳಿಯಂತೆ ನಡೆಸುವ ಪ್ರಕ್ರಿಯೆಗೆ ಅನುಮೋದನೆಯನ್ನು ಕೋರಿದೆ. | ಸಭೆಯು ವಿವರಗಳನ್ನು ಪರಿಶೀಲಿಸಿತು. ಈ ವಿಷಯವನ್ನು ಮುಂದೂಡುವಂತೆ ಸಭೆಯು ನಿರ್ಣಯಿಸಿತು. |
| ವಿಷಯ 12 | **ಸ್ವರ್ಣಪದಕ ನೀಡಲು ಸ್ಥಾಪಿಸಿದ ದತ್ತಿನಿಧಿಯ ಬಗೆಗೆ.**<br>ಶ್ರೀ ಪರಾಶರ ಆಸ್ಟ್ರೋ ಸೆಂಟರ್ ಫಾರ್ ಎಜುಕೇಶನ್ ಸಂಸ್ಥೆಯು ಜ್ಯೋತಿಷ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ದತ್ತಿನಿಧಿಯನ್ನು ಸ್ಥಾಪಿಸಲು **ರೂ. 25,000/–**ಗಳನ್ನು ವಿಶ್ವವಿದ್ಯಾಲಯಕ್ಕೆ ನೀಡಿದ್ದು, ಪ್ರಶಾಸನ ಸಮಿತಿಯ ಚರ್ಚೆಗಾಗಿ ಸಭೆಯ ಮುಂದೆ ಮಂಡಿಸಿದೆ. | **ಸ್ವರ್ಣಪದಕವನ್ನು ನೀಡಲು ಕನಿಷ್ಠ ರೂ. 50,000/–ಗಳ ದತ್ತಿನಿಧಿ ಸ್ಥಾಪಿಸುವುದು ಅವಶ್ಯವೆಂದು ಸಭೆಯು ತೀರ್ಮಾನಿಸಿತು. ಈ ಬಗ್ಗೆ ಶ್ರೀ ಪರಾಶರ ಆಸ್ಟ್ರೋ ಸೆಂಟರ್ ಫಾರ್ ಎಜುಕೇಶನ್ ಸಂಸ್ಥೆಗೆ ಪತ್ರ ಬರೆಯಲು ಸಭೆಯು ಸೂಚಿಸಿತು. ಒಂದು** |

| | | |
|---|---|---|
| | | ವೇಳೆ ಸಂಸ್ಥೆಯು ಉಳಿದ ಹಣ ನೀಡದಿದ್ದಲ್ಲಿ, ಈಗಾಗಲೇ ನೀಡುರುವ ಮೊತ್ತಕ್ಕೆ ಸ್ವೀಕೃತವಾಗುವ ಬಡ್ಡಿಹಣದಲ್ಲಿ ನಗದು ಪುರಸ್ಕಾರ ನೀಡಲು ಸಭೆಯು ಸೂಚಿಸಿತು. ಈ ಅನುದಾನವನ್ನು ಮುಂದಿನ 10 ವರ್ಷಗಳ ವರೆಗೆ ಮಾತ್ರ ಪರಿಗಣಿಸಲಾಗುವುದು ಎಂದೂ ನಿರ್ಣಯಿಸಲಾಯಿತು. |
| ವಿಷಯ 13 | **ನೇಮಕಾತಿ ಸಂದರ್ಭದಲ್ಲಿ 12.25 ಅಂಕಗಳನ್ನು ನಿಗದಿಪಡಿಸಿರುವ ಸರ್ಕಾರಿ ಆದೇಶವನ್ನು ಅನುಷ್ಠಾನಕ್ಕೆ ತರುವ ಬಗೆಗೆ.**<br>ಭಾರತದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಹಾಗೂ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶದಂತೆ, ಭವಿಷ್ಯದಲ್ಲಿ ಬೋಧಕ ಹುದ್ದೆಗಳ ಸಂದರ್ಶನಕ್ಕೆ ಹಾಜರಾಗುವ ಅರ್ಹ ಅಭ್ಯರ್ಥಿಗಳಿಗೆ 12.25 ಅಂಕಗಳನ್ನು ನಿಗದಿಪಡಿಸಬಹುದಾಗಿದೆ. ಈ ಆದೇಶವನ್ನು ಅನುಷ್ಠಾನಗೊಳಿಸಲು ಪ್ರಶಾಸನ ಸಮಿತಿಯ ಅನುಮೋದನೆಯನ್ನು ಕೋರಿದೆ. | ಸರ್ಕಾರದ ಆದೇಶದಂತೆ ನೇಮಕಾತಿ ಸಂದರ್ಭದಲ್ಲಿ ಬೋಧಕ ಹುದ್ದೆಗಳ ಸಂದರ್ಶನಕ್ಕೆ ಶೇ. 12.25 ಅಂಕಗಳನ್ನು ಅಳವಡಿಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು. |
| ವಿಷಯ 14 | **ಗೌರವ ಡಿ.ಲಿಟ್. ನೀಡುವ ಸಂಬಂಧ ಸರ್ಕಾರಿ ನಿರ್ದೇಶನವನ್ನು ಪಾಲಿಸುವ ಬಗೆಗೆ.**<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಹಾಗೂ ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶನದಂತೆ, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಪ್ರತಿವರ್ಷ ಘಟಿಕೋತ್ಸವ ಸಂದರ್ಭದಲ್ಲಿ ಕೇವಲ ಮೂವರು ಅರ್ಹ ವಿದ್ವಾಂಸರಿಗೆ ಡಿ.ಲಿಟ್ ಪದವಿಯನ್ನು ನೀಡಬೇಕಾಗಿದ್ದು, ಈ ನಿರ್ದೇಶನವನ್ನು ಕಡ್ಡಾಯವಾಗಿ ಪಾಲಿಸಬೇಕಿದೆ. ಈ ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | ಗೌರವ ಡಿ.ಲಿಟ್. ನೀಡುವ ಸಂದರ್ಭದಲ್ಲಿ ಸರ್ಕಾರದ ನಿರ್ದೇಶನವನ್ನು ಪಾಲಿಸಲು ಸಭೆಯು ಅನುಮೋದಿಸಿತು. |
| ವಿಷಯ 15 | **ಪ್ರೊ. ಎಂ.ಕೆ. ಶ್ರೀಧರ್, ಕುಲಸಚಿವರು, ಕ.ಸಂ.ವಿ.–ಇವರ ವೈಯಕ್ತಿಕ ಅಮೆರಿಕಾ ಪ್ರವಾಸ ಅನುಮೋದನೆ ಬಗೆಗೆ.**<br>ಮಾನ್ಯ ಕುಲಸಚಿವರಾದ ಪ್ರೊ. ಎಂ.ಕೆ. ಶ್ರೀಧರ್ ಅವರು 2015ನೇ ಜೂನ್ 3ನೇ ವಾರ ಅಥವಾ ಜುಲೈ 3ನೇ ವಾರದಲ್ಲಿ ಮೂರು ವಾರಗಳ ಕಾಲ ವೈಯಕ್ತಿಕ ಅಮೆರಿಕಾ ಪ್ರವಾಸವನ್ನು ಕೈಗೊಳ್ಳಲಿದ್ದಾರೆ. ಈ ಪ್ರವಾಸಕ್ಕೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದಾಗಲೀ ಅಥವಾ ಕರ್ನಾಟಕ ಸರ್ಕಾರದಿಂದಾಗಲೀ ಯಾವುದೇ ಆರ್ಥಿಕ ಸಹಾಯವನ್ನು ಪಡೆಯುತ್ತಿಲ್ಲ. ಅವರು ಅಮೆರಿಕಾ ಪ್ರವಾಸವನ್ನು ಕೈಗೊಳ್ಳಲು ಅನುಮತಿ ನೀಡಿ, ವಿಶ್ವವಿದ್ಯಾಲಯದಿಂದ ನಿರಾಕ್ಷೇಪಣಾ ಪತ್ರ ನೀಡಲು ಸಭೆಯ ಮುಂದೆ ಮಂಡಿಸಿದೆ. | ಕುಲಸಚಿವರಾದ ಪ್ರೊ. ಎಂ.ಕೆ. ಶ್ರೀಧರ್ ಅವರ ವೈಯಕ್ತಿಕ ಅಮೆರಿಕಾ ಪ್ರವಾಸದ ವಿವರಗಳನ್ನು ಸಭೆಯು ಪರಿಶೀಲಿಸಿ, 2015ರ ಜೂನ್ ಕೊನೆಯ ವಾರದಲ್ಲಿ (ಮೂರು ವಾರಗಳು) ಪ್ರವಾಸ ಕೈಗೊಳ್ಳಲು ತನ್ನ ಒಪ್ಪಿಗೆಯನ್ನು ನೀಡಿತು. ಈ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ NOC ಪಡೆಯಲು ಸೂಚಿಸಿತು. |
| ವಿಷಯ 16 | **ಬೋಧಕರ ಹುದ್ದೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಬಗೆಯ ತಾತ್ಕಾಲಿಕ ನೇಮಕಾತಿಗೆ 'ಏಕಗವಾಕ್ಷಿ' ಪದ್ಧತಿಯನ್ನು ಜಾರಿಗೆ ತರುವ ಕುರಿತು.**<br>ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 01.12.2014ರಂದು ನಡೆದ 12ನೇ ಸಾಮಾನ್ಯ ಸಭೆಯು ವಿಶ್ವವಿದ್ಯಾಲಯಗಳಲ್ಲಿ ಬೋಧಕ ಹಾಗೂ ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಬಗೆಯ ತಾತ್ಕಾಲಿಕ ನೇಮಕಾತಿಗೆ 'ಏಕಗವಾಕ್ಷಿ' ಪದ್ಧತಿಯನ್ನು ಜಾರಿಗೆ ತರಲು ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ನಿರ್ಣಯದಂತೆ ಅಗತ್ಯ ಕ್ರಮಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸಬೇಕಾಗಿದ್ದು, ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. | ಬೋಧಕ ಹಾಗೂ ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಬಗೆಯ ತಾತ್ಕಾಲಿಕ ನೇಮಕಾತಿಗೆ 'ಏಕಗವಾಕ್ಷಿ' ಪದ್ಧತಿಯನ್ನು ಜಾರಿಗೆ ತರಲು ಸಭೆಯು ಅನುಮೋದಿಸಿತು. |
| ವಿಷಯ 17 | **ಫೆಡರೇಷನ್ ಆಫ್ ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ (FKCCI)ನ ಸಹಭಾಗಿತ್ವದಲ್ಲಿ ಉದ್ಯೋಗ ಸಲಹಾ ಕೇಂದ್ರಗಳನ್ನು ಸ್ಥಾಪಿಸುವ ಕುರಿತು.**<br>ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 01.12.2014ರಂದು ನಡೆದ 12ನೇ ಸಾಮಾನ್ಯ ಸಭೆಯು ವಿಶ್ವವಿದ್ಯಾಲಯಗಳಲ್ಲಿ ಫೆಡರೇಷನ್ ಆಫ್ ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ (FKCCI)ನ ಸಹಭಾಗಿತ್ವದಲ್ಲಿ ಉದ್ಯೋಗ ಸಲಹಾ ಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಸರ್ವಾನುಮತದಿಂದ ಅಂಗೀಕರಿಸಿ, ಈ ಸಂಬಂಧ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ತಮ್ಮ ಪರಿನಿಯಮಗಳಲ್ಲಿ ಇದನ್ನು ಅಳವಡಿಸಿಕೊಳ್ಳುವ ಸಲುವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವಂತೆ ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ನಿರ್ಣಯವನ್ನು ಕಡ್ಡಾಯವಾಗಿ ಪಾಲಿಸುವಂತೆ ಹಾಗೂ | ಸರ್ಕಾರದ ಆದೇಶದಂತೆ ಫೆಡರೇಷನ್ ಆಫ್ ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ (FKCCI)ನ ಸಹಭಾಗಿತ್ವದಲ್ಲಿ ಉದ್ಯೋಗ ಸಲಹಾ ಕೇಂದ್ರವನ್ನು ಸ್ಥಾಪಿಸಲು ಅಗತ್ಯ ಕ್ರಮಕೈಗೊಳ್ಳಲು ಸಭೆಯು ಅನುಮೋದಿಸಿತು. ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲು ಸೂಚಿಸಿತು. |

| | | |
|---|---|---|
| | ಕೂಡಲೇ ಅಗತ್ಯ ಕ್ರಮಕೈಗೊಂಡು ಸರ್ಕಾರಕ್ಕೆ ವರದಿ ಮಾಡುವಂತೆ ಸೂಚಿಸಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ. | |
| ವಿಷಯ 18 | **ರಾಜ್ಯದ ಅನುದಾನಿತ ಸಂಸ್ಕೃತ ಕಾಲೇಜುಗಳಲ್ಲಿ ನಿವೃತ್ತಿ, ರಾಜೀನಾಮೆ, ಮುಂಬಡ್ತಿ ಮತ್ತು ನಿಧನ –ಈ ಕಾರಣಗಳಿಂದ ಖಾಲಿ ಇರುವ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗೆಗೆ.**<br>ರಾಜ್ಯದ ಅನುದಾನಿತ ಸಂಸ್ಕೃತ ಕಾಲೇಜುಗಳಲ್ಲಿ ನಿವೃತ್ತಿ, ರಾಜೀನಾಮೆ, ಮುಂಬಡ್ತಿ ಮತ್ತು ನಿಧನ –ಈ ಕಾರಣಗಳಿಂದ ಖಾಲಿ ಇರುವ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಬೇಕೆಂದು ಅಖಿಲ ಕರ್ನಾಟಕ ಸಂಸ್ಕೃತ ಕಾಲೇಜುಗಳ ಪ್ರಾಚಾರ್ಯರ ಸಂಘ (ರಿ.)ದ ಅಧ್ಯಕ್ಷರಾದ ಡಾ. ಸಿ. ನಂಜುಂಡಯ್ಯ ಅವರು ದಿನಾಂಕ: 30.04.2015ರ ಪತ್ರದಲ್ಲಿ ಕೋರಿರುತ್ತಾರೆ. ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಮೀಸಲಾತಿ ಹಾಗೂ ಕಲಂ 371(ಜೆ) ನಿಯಮಾನುಸಾರ, ಸರ್ಕಾರದ ಅನುಮೋದನೆಯನ್ನು ಪಡೆದು ಭರ್ತಿ ಮಾಡಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | **ಅನುದಾನಿತ ಸಂಸ್ಕೃತ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಸರ್ಕಾರದ ಮೀಸಲಾತಿ ಹಾಗೂ ನಿಯಮಾನುಸಾರ ಭರ್ತಿ ಮಾಡಿಕೊಂಡು, ನಂತರ ಸರ್ಕಾರದ ಅನುಮೋದನೆ ಪಡೆದು ನೇಮಕಾತಿಯನ್ನು ದೃಢೀಕರಿಸಲು ಸಭೆಯು ಅನುಮೋದಿಸಿತು.** |
| ವಿಷಯ 19 | **ವಿಶ್ವವಿದ್ಯಾಲಯದಲ್ಲಿ ಬೌದ್ಧದರ್ಶನ ಅಧ್ಯಯನ ಕೇಂದ್ರದ ಸ್ಥಾಪನೆ ಪ್ರಸ್ತಾವನೆಯ ಬಗೆಗೆ.**<br>ಡಾ. ಜೆ. ಶ್ರೀನಿವಾಸಮೂರ್ತಿ ಅವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ತಮ್ಮ ಪ್ರಸ್ತಾವನೆಯಲ್ಲಿ, ಸಂಸ್ಕೃತ ವಿಶ್ವವಿದ್ಯಾಲಯವು ಸಂಸ್ಕೃತದ ಮೂಲ ಗ್ರಂಥಗಳ ಜೊತೆಗೆ ಸೋದರ ಭಾಷೆಗಳಾದ ಪಾಲಿ–ಪ್ರಾಕೃತ ಭಾಷೆಗಳನ್ನು ಅಧ್ಯಯನ ಮಾಡುವ ಅವಕಾಶವನ್ನು ಕಲ್ಪಿಸಿಕೊಡಬೇಕು. ಪಾಲಿ–ಸಂಸ್ಕೃತ ಎರಡೂ ಭಾಷೆಗಳಲ್ಲಿರುವ ಬೌದ್ಧದರ್ಶನದ ಸರ್ವಾಂಗೀಣ ಅಧ್ಯಯನ ನಡೆಸಲು ಒಂದು ಅಧ್ಯಯನ ಕೇಂದ್ರವನ್ನು ಆರಂಭಿಸಬೇಕೆಂದು ಸೂಚಿಸಿದ್ದಾರೆ. ಈ ಬಗೆಗೆ ಚರ್ಚಿಸಲು ಸಭೆಯ ಮುಂದೆ ಮಂಡಿಸಿದೆ. | **ಬೌದ್ಧದರ್ಶನ ಅಧ್ಯಯನ ಕೇಂದ್ರದ ಸ್ಥಾಪನೆ ಪ್ರಸ್ತಾವನೆಯನ್ನು ಸಭೆಯು ಪರಿಶೀಲಿಸಿತು. ಬೌದ್ಧದರ್ಶನ ಅಧ್ಯಯನ ಕೇಂದ್ರದ ಬದಲಿಗೆ, 'ಪಾಲಿ ಹಾಗೂ ಪ್ರಾಕೃತ ಅಧ್ಯಯನ ಸಂಸ್ಥೆ'ಯನ್ನು ಪ್ರಾರಂಭಿಸಲು ಸಭೆಯು ಅನುಮತಿ ನೀಡಿತು. ಸದ್ಯಕ್ಕೆ ಮೈಸೂರಿನ ಕಾಲೇಜಿನ ಪರಿಸರದಲ್ಲಿ ಈ ಸಂಸ್ಥೆಯ ಕಾರ್ಯವನ್ನು ಆರಂಭಿಸುವುದು.** |
| ವಿಷಯ 20 | **ಶ್ರೀಮತಿ ಸಿ.ಎನ್. ನಿರ್ಮಲ, ಸಹಶಿಕ್ಷಕರು, ಶ್ರೀ ಸದ್ಗುರು ಕಬೀರಾನಂದಸ್ವಾಮಿ ಸಂಸ್ಕೃತ ಪಾಠಶಾಲೆ, ಕರುವಿನಕಟ್ಟೆ, ಚಿತ್ರದುರ್ಗ –ಇವರಿಗೆ ಸಾಹಿತ್ಯ ವೇತನಶ್ರೇಣಿಗೆ ಬಡ್ತಿ ನೀಡಿ ಅನುಮೋದಿಸುವ ಬಗೆಗೆ.**<br>ಶ್ರೀಮತಿ ಸಿ.ಎನ್. ನಿರ್ಮಲ, ಸಹಶಿಕ್ಷಕರು, ಶ್ರೀ ಸದ್ಗುರು ಕಬೀರಾನಂದಸ್ವಾಮಿ ಸಂಸ್ಕೃತ ಪಾಠಶಾಲೆ, ಕರುವಿನಕಟ್ಟೆ, ಚಿತ್ರದುರ್ಗ –ಇವರು ದಿನಾಂಕ: 09.01.2013 ರಂದು ಸಂಸ್ಕೃತ ಸಹಶಿಕ್ಷಕರ ಹುದ್ದೆಗೆ ವೇತನಶ್ರೇಣಿ: 11600–21000ರಲ್ಲಿ ನೇಮಕಾತಿಯಾಗಿದ್ದು, ದಿನಾಂಕ: 13.08.2014ರಲ್ಲಿ ಸದರಿ ಶಿಕ್ಷಕರಿಗೆ ಸಾಹಿತ್ಯ ವೇತನಶ್ರೇಣಿಯನ್ನು ಮಂಜೂರು ಮಾಡಲು ಆಡಳಿತಮಂಡಳಿಯು ಪ್ರಸ್ತಾವನೆಯನ್ನು ಸಲ್ಲಿಸಿದೆ. ಕಡತ ಸಂಖ್ಯೆ: ಕಸಂವಿ.ಸಂಶಿ.ನಿ. ಅ.ಸಂ.ಪಾ.ಮಾ.32/2013–14ರಲ್ಲಿ ಪುಟ ಸಂಖ್ಯೆ:16. ಮಾನ್ಯ ಕುಲಪತಿಗಳ ಕಂಡಿಕೆ ಸಂಖ್ಯೆ: 42ರಲ್ಲಿ ಸದರಿ ಶಿಕ್ಷಕರ ಖಾಯಂ ಪೂರ್ವಸೇವಾಧಿಯ ನಂತರ ಪುನರ್ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಗಿತ್ತು.<br>ದಿನಾಂಕ: 08.01.2015.ರಂದು ಶ್ರೀಮತಿ ಸಿ.ಎನ್. ನಿರ್ಮಲ, ಸಹಶಿಕ್ಷಕರು, ಇವರು 2 ವರ್ಷಗಳ ಖಾಯಂಪೂರ್ವ ಸೇವಾವಧಿಯನ್ನು ಪೂರೈಸಿರುವುದರಿಂದ ದಿನಾಂಕ: 06.03.2015ರಂದು ಆಡಳಿತ ಮಂಡಳಿಯವರು ಸದರಿ ಶಿಕ್ಷಕರಿಗೆ ಸಾಹಿತ್ಯ ವೇತನಶ್ರೇಣಿಯನ್ನು ನಿಗದಿಪಡಿಸಲು ಪುನರ್ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಪ್ರಶಾಸನ ಸಮಿತಿಯ ಅನುಮೋದನೆಗೆ ಇರಿಸಿದೆ. | **ಈ ಬಗ್ಗೆ ಚರ್ಚಿಸಿ ಸಭೆಯು ಒಪ್ಪಿಗೆಯನ್ನು ನೀಡಿತು.** |
| ವಿಷಯ 21 | **ಅನುದಾನಿತ ಸಂಸ್ಕೃತ ಪಾಠಶಾಲೆಗಳ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ರಚಿಸಿದ್ದ ಉಪಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**<br>ದಿನಾಂಕ: 18.03.2015ರಂದು ನಡೆದ ಪ್ರಶಾಸನ ಸಮಿತಿ ಇಪ್ಪತ್ತೈದನೇ ಸಭೆಯ ನಿರ್ಣಯದಂತೆ, ರಾಜ್ಯದ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಂಬಂಧ ಉಪಸಮಿತಿಯನ್ನು ರಚಿಸಲಾಗಿತ್ತು. ಈ ಉಪಸಮಿತಿಯು ದಿನಾಂಕ: 19.05.2015ರಂದು ಸಭೆ ನಡೆಸಿತು. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿ ಅನುಮೋದನೆಗಾಗಿ ಮಂಡಿಸಿದೆ. | **ದಿನಾಂಕ: 19.05.2013ರಂದು ಉಪಸಮಿತಿ ಸಭೆಯ ನಡಾವಳಿಯ ಪರಿಶೀಲಿಸಿತು. ನಿಯಮಾನುಸಾರ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬಹುದೆಂದು ಸಭೆಯು ನಿರ್ಣಯಿಸಿತು.** |
| ವಿಷಯ 22 | **ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸಂಸ್ಕೃತ ಪಾಠಶಾಲೆ, ಗವಿಮಠ ಹಾಗೂ ಗೀರ್ವಾಣ ಭಾರತಿ ಸಂಸ್ಕೃತ ಪಾಠಶಾಲೆ, ವಿದ್ಯಾಮಾನ್ಯನಗರ, ಬೆಂಗಳೂರು–ಈ ಪಾಠಶಾಲೆಗಳಲ್ಲಿ ಖಾಲಿ ಇದ್ದ ಬ್ಯಾಕ್‌ಲಾಗ್ ಹುದ್ದೆಗಳ ನೇಮಕವನ್ನು ಅನುಮೋದಿಸುವ ಬಗೆಗೆ.**<br>ಮಾನ್ಯ ಕುಲಪತಿಗಳ (ಪ್ರ) ಆದೇಶದಂತೆ, ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸಂಸ್ಕೃತ | **ನೇಮಕ ಮಾಡಿಕೊಂಡಿರುವ ಎರಡು ಬ್ಯಾಕ್‌ಲಾಗ್ ಹುದ್ದೆಗಳಿಗೆ ಅನುಮೋದನೆ ನೀಡಲಾಯಿತು.** |

| | | |
|---|---|---|
| | ಪಾಠಶಾಲೆ, ಗವಿಮಠ, ಕುಣಿಗಲ್ ತಾಲ್ಲೂಕು ಹಾಗೂ ಗೀರ್ವಾಣಭಾರತಿ ಸಂಸ್ಕೃತ ಪಾಠಶಾಲೆ, ವಿದ್ಯಾಮಾನ್ಯನಗರ, ವಿಶ್ವನೀಡಂ ಅಂಚೆ, ಬೆಂಗಳೂರು –ಈ ಎರಡು ಪಾಠಶಾಲೆಗಳಲ್ಲಿ ಖಾಲಿ ಇದ್ದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಿದ್ದು, ಆಡಳಿತ ಮಂಡಳಿಯವರು ನೇಮಕಾತಿ ಸಂದರ್ಶನ ನಡೆಸಿ, ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಂಡಿದ್ದು, ನೇಮಕಾತಿಯನ್ನು ಅನುಮೋದಿಸುವಂತೆ ನಿರ್ದೇಶನಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಈ ಎರಡು ಹುದ್ದೆಗಳನ್ನು ನಿರ್ದೇಶನಾಲಯದ ಹಂತದಲ್ಲೇ ನೇಮಕಾತಿ ಆದೇಶ ನೀಡಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | |
| ವಿಷಯ 23 | **ಶಾಂಡಿಲ್ಯ ಇನ್ಫೋಟೆಕ್ ಪ್ರೈ.ಲಿ. ಸಂಸ್ಥೆಯಿಂದ ಹಣಕಾಸು ವಿಭಾಗಕ್ಕೆ ತಜ್ಞ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಣಕಾಸು ವ್ಯವಹಾರಗಳು ಅಧಿಕವಾಗಿರುವ ಹಿನ್ನೆಲೆಯಲ್ಲಿ, ಹಣಕಾಸು ವ್ಯವಹಾರಗಳ ಸೂಕ್ತ ನಿರ್ವಹಣೆಗಾಗಿ ತಜ್ಞ ಸಿಬ್ಬಂದಿಯೊಬ್ಬರ ಆವಶ್ಯಕತೆಯಿದೆ. ಅಲ್ಲದೆ, ಈ ಹಿಂದಿನ ಲೆಕ್ಕಪರಿಶೋಧನೆಯಲ್ಲಿ ಕೆಲವು ತಾಂತ್ರಿಕ ದೋಷಗಳು ಇರುವುದಾಗಿ ಸರ್ಕಾರಿ ಲೆಕ್ಕಪರಿಶೋಧಕರು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ನಮ್ಮ ವಿಶ್ವವಿದ್ಯಾಲಯದ ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನು ನಿರ್ವಹಿಸುತ್ತಿರುವ **'ಮೆ॥ ಶಾಂಡಿಲ್ಯ ಇನ್ಫೋಟೆಕ್ ಪ್ರೈ.ಲಿ., ಬೆಂಗಳೂರು'** –ಈ ಸಂಸ್ಥೆಯೊಂದಿಗೆ ಒಪ್ಪಂದವನ್ನು ಮಾಡಿಕೊಂಡು ಸೇವೆಯನ್ನು ಪಡೆಯಲು, ಆ ಸಂಸ್ಥೆಯು ಪ್ರತಿ ತಿಂಗಳಿಗೆ **ರೂ. 30,000/**–ಗಳನ್ನು ಶುಲ್ಕವಾಗಿ ಸೂಚಿಸಿದ್ದಾರೆ. ಈ ಸಂಸ್ಥೆಯಿಂದ ನಿಯೋಜನೆಗೊಳ್ಳುವ ಸಿಬ್ಬಂದಿಯು ಹಣಕಾಸು ವಿಭಾಗಕ್ಕೆ ಸಂಬಂಧಿಸಿದ ಎಲ್ಲ ಕೆಲಸ–ಕಾರ್ಯಗಳನ್ನು (ಉದಾ: ಪಾವತಿಗಳು ಮತ್ತು ಜಮೆಗಳು, ಆದಾಯ ತೆರಿಗೆ, ವೃತ್ತಿ ತೆರಿಗೆ, ವೇತನ, ಇತ್ಯಾದಿ) ನಿರ್ವಹಿಸಲಿದ್ದಾರೆ. ಈ ಸಂಸ್ಥೆಯಿಂದ ಒಪ್ಪಂದದ ಮೇಲೆ ಸೇವೆಯನ್ನು ಪಡೆಯಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | **ಈ ವರ್ಷದ ಅವಧಿಗೆ ಶಾಂಡಿಲ್ಯ ಇನ್ಫೋಟೆಕ್ ಪ್ರೈ.ಲಿ. ಸಂಸ್ಥೆಯ ಸೇವೆಯನ್ನು ಪಡೆಯಲು ಹಾಗೂ ಅದಕ್ಕೆ ನಿಗದಿಪಡಿಸಿದ ಶುಲ್ಕ ಪಾವತಿಗೂ ಸಭೆಯು ತೀರ್ಮಾನಿಸಿತು.** |
| ವಿಷಯ 24 | **ರಾಜ್ಯದ ಎಲ್ಲ ಸಂಸ್ಕೃತ ಕಾಲೇಜುಗಳಲ್ಲಿ ಆನ್‌ಲೈನ್ ಅಡ್ಮಿಶನ್ ವ್ಯವಸ್ಥೆಯನ್ನು ಅಳವಡಿಸುವ ಬಗೆಗೆ.**<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಹಾಗೂ ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶನದಂತೆ, ಈ ಶೈಕ್ಷಣಿಕ ವರ್ಷದಿಂದ ವಿಶ್ವವಿದ್ಯಾಲಯದ ಬಿ.ಎ. (ವಿದ್ವನ್ಮಧ್ಯಮಾ) ಹಾಗೂ ಎಂ.ಎ. (ವಿದ್ವದುತ್ತಮಾ) ಪದವಿಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ನೋಂದಣಿ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಇದಕ್ಕೆ NIC Portal ನಲ್ಲಿರುವ ಆನ್‌ಲೈನ್ ನಿರ್ವಹಣಾ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಹಾಗೂ ಪ್ರಾಚಾರ್ಯರು/ಅಧ್ಯಾಪಕರು/ಬೋಧಕೇತರ ಸಿಬ್ಬಂದಿ –ಇವರಿಗೆ ಸೂಕ್ತ ತರಬೇತಿಯನ್ನು ನೀಡಲು ಉದ್ದೇಶಿಸಲಾಗಿದೆ. ಈ ಪ್ರಸ್ತಾವವನ್ನು ಸಭೆಯ ಅವಗಾಹನೆಗಾಗಿ ಮಂಡಿಸಿದೆ. | **ಆನ್‌ಲೈನ್ ನೋಂದಣಿಗೆ ಸಂಬಂಧಿಸಿದಂತೆ ಹಾಗೂ ಪ್ರಾಚಾರ್ಯರು, ಅಧ್ಯಾಪಕರು/ಬೋಧಕೇತರ ಸಿಬ್ಬಂದಿಗೆ ಸೂಕ್ತ ತರಬೇತಿಯನ್ನು ನೀಡುವ ಪೂರ್ಣ ಜವಾಬ್ದಾರಿಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸ್ಥಾಪಿಸಿರುವ ಐ.ಟಿ. ಕೋಶಕ್ಕೆ ನೀಡಲು ಸಭೆಯು ತೀರ್ಮಾನಿಸಿತು.** |
| ವಿಷಯ 25 | **NAAC ಸಂಸ್ಥೆಯಿಂದ ಎಲ್ಲ ಕಾಲೇಜುಗಳ ಪ್ರಾಚಾರ್ಯರು ಹಾಗೂ ವಿಶ್ವವಿದ್ಯಾಲಯದ ಸಿಬ್ಬಂದಿಗೆ ಒಂದು ಕಾರ್ಯಾಗಾರವನ್ನು ನಡೆಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸ್ಥಾಪನೆಯಾಗಿ ಐದು ವರ್ಷಗಳು ಪೂರೈಸಿದ್ದು, ರಾಷ್ಟ್ರೀಯ ಪರೀಕ್ಷಾ ಮತ್ತು ಮಾನ್ಯತಾ ಸಂಸ್ಥೆ (NAAC) ಮಾನ್ಯತೆಗೆ ಸಿದ್ಧತೆಯನ್ನು ನಡೆಸ ಬೇಕಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಘಟಕ ಕಾಲೇಜುಗಳು ಮತ್ತು ಅನುದಾನಿತ/ಅನುದಾನರಹಿತ ಸಂಸ್ಕೃತ ಕಾಲೇಜುಗಳು ಸಹ NAAC ಪರಿಶೀಲನೆಗೆ ಒಳಪಡುತ್ತವೆ. ಈ ಹಿನ್ನೆಲೆಯಲ್ಲಿ NAAC ಸಂಸ್ಥೆಯು ಎಲ್ಲಾ ಕಾಲೇಜುಗಳ ಪ್ರಾಚಾರ್ಯರು ಹಾಗೂ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಒಂದು ದಿನದ ಕಾರ್ಯಾಗಾರವನ್ನು ನಡೆಸಲು ಸೂಚಿಸಿದೆ. ಈ ಕಾರ್ಯಾಗಾರಕ್ಕೆ ಅಂದಾಜು **ಒಂದು ಲಕ್ಷ ರೂ.** ಖರ್ಚಾಗಲಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ. | **ಎಲ್ಲ ಸಂಸ್ಕೃತ ಕಾಲೇಜುಗಳ ಪ್ರಾಚಾರ್ಯರು ಹಾಗೂ ವಿಶ್ವವಿದ್ಯಾಲಯದ ಸಿಬ್ಬಂದಿಗೆ NAAC ಸಂಸ್ಥೆಯಿಂದ ಒಂದು ದಿನದ ಕಾರ್ಯಾಗಾರವನ್ನು ನಡೆಸಲು ಸಭೆಯು ತನ್ನ ಅನುಮೋದನೆಯನ್ನು ನೀಡಿತು. ಈ ಸಂಬಂಧದ ಕಾರ್ಯನಿರ್ವಹಣೆಗಾಗಿ ಒಬ್ಬ ಸಹಾಯಕ ಪ್ರಾಧ್ಯಾಪಕರನ್ನು ಸಂಯೋಜಕರನ್ನಾಗಿ ಮಾಡಲು ಸಭೆಯು ಸೂಚಿಸಿತು.** |
| ವಿಷಯ 26 | **ಆಡಳಿತಾತ್ಮಕ ಕಾರ್ಯಗಳ ನಿರ್ವಹಣಾ ದೃಷ್ಟಿಯಿಂದ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಎರಡು ದಿನಗಳ ಕಾರ್ಯಾಗಾರವನ್ನು ಹಮ್ಮಿಕೊಳ್ಳುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬೋಧಕ–ಬೋಧಕೇತರ ಸಿಬ್ಬಂದಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ನಿರ್ವಹಣಾ ವ್ಯವಸ್ಥೆ, ವೃತ್ತಿನಿರ್ವಹಣೆ, ವ್ಯಕ್ತಿಗತ ನಿರ್ವಹಣೆ, ಅಂತರ ವ್ಯಕ್ತಿ ಸಂಬಂಧ –ಮುಂತಾದವುಗಳ ಬಗ್ಗೆ ಎರಡು ದಿನಗಳ ಕಾರ್ಯಾಗಾರವೊಂದನ್ನು ಯಾವುದಾದರೂ ಸಂಸ್ಥೆಯೊಂದರ ಸಹಾಯದೊಂದಿಗೆ | **ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪರ್ಸನಲ್ ಮ್ಯಾನೇಜ್‌ಮೆಂಟ್, ಬೆಂಗಳೂರು ಅಥವಾ ಇನ್ನಾವುದೇ ಸೂಕ್ತ ಸಂಸ್ಥೆಯ ಮೂಲಕ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಎರಡು ದಿನಗಳ ಕಾರ್ಯಾಗಾರವನ್ನು ಹಮ್ಮಿಕೊಳ್ಳಲು** |

| | | |
|---|---|---|
| | ನಗರದ ಹೊರವಲಯದಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಈ ಕಾರ್ಯಾಗಾರಕ್ಕೆ ಅಂದಾಜು **1.50** ಲಕ್ಷ ರೂ. ಖರ್ಚಾಗಲಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ. | **ಸಭೆಯು ಅನುಮತಿ ನೀಡಿತು.** |
| ವಿಷಯ 27 | **ಡೀನರು / ಅಧ್ಯಯನಾಂಗದ ನಿರ್ದೇಶಕರು / ಪರೀಕ್ಷಾಂಗ ನಿಯಂತ್ರಕರು / ಯೋಜನಾ ನಿರ್ದೇಶಕರು / ಉಪನಿರ್ದೇಶಕರು(ಪ್ರಸಾರಾಂಗ) –ಇವರ ಮೊಬೈಲ್ ಬಿಲ್‌ನ ಮೊತ್ತವನ್ನು ಪಾವತಿಸುವ ಬಗೆಗೆ.**<br>ಡೀನರು / ಅಧ್ಯಯನಾಂಗದ ನಿರ್ದೇಶಕರು / ಪರೀಕ್ಷಾಂಗ ನಿಯಂತ್ರಕರು / ಯೋಜನಾ ನಿರ್ದೇಶಕರು / ಉಪನಿರ್ದೇಶಕರು (ಪ್ರಸಾರಾಂಗ), ಮೊದಲಾದ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ವಿಶ್ವವಿದ್ಯಾಲಯದ ಉದ್ದೇಶ್ಯಗಳಿಗಾಗಿ ಬಳಸುವ ಮೊಬೈಲ್ ಬಿಲ್‌ನ ಮೊತ್ತವನ್ನು ಪಾವತಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | **ವಿಶ್ವವಿದ್ಯಾಲಯದ ಉದ್ದೇಶಗಳಿಗಾಗಿ ಈ ಅಧಿಕಾರಿಗಳು ಬಳಸುವ ಮೊಬೈಲ್ ಬಿಲ್‌ನ ವೆಚ್ಚವನ್ನು ಪಾವತಿಸಲು ಸಭೆಯು ತನ್ನ ಅನುಮೋದನೆಯನ್ನು ನೀಡಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾವವಾದ ಇತರ ವಿಷಯಗಳು:** | | |
| ವಿಷಯ 01 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 4ನೇ ಘಟಿಕೋತ್ಸವವನ್ನು ಆಯೋಜಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಈಗಾಗಲೇ 3 ಘಟಿಕೋತ್ಸವಗಳು ಮುಗಿದಿದ್ದು, 4ನೇ ಘಟಿಕೋತ್ಸವವನ್ನು ಆಯೋಜಿಸಬೇಕಿದೆ. ಅನೇಕ ವಿದ್ಯಾರ್ಥಿಗಳೂ ಕೂಡ ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ 2013–14ನೇ ಸಾಲಿನಲ್ಲಿ ಉತ್ತೀರ್ಣರಾದ ಬಿ.ಎ/ಎಂ.ಎ. ಹಾಗೂ ಎಂ.ಫಿಲ್ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪ್ರಮಾಣಪತ್ರಗಳನ್ನು ನೀಡಬೇಕಾಗಿದೆ. ಇದಕ್ಕೆ ಸುಮಾರು 8–10 ಲಕ್ಷ ರೂಗಳ ವೆಚ್ಚವನ್ನು ಅಂದಾಜಿಸಲಾಗಿದೆ. ಸಭೆಯ ಅವಗಾಹನೆಗಾಗಿ ಇರಿಸಿದೆ. ಈ ಸಂಬಂಧ ಘನತೆವೆತ್ತ ರಾಜ್ಯಪಾಲರಿಂದ ಅನುಮೋದನೆ ಪಡೆಯಬೇಕಿದೆ. ಮುಂದಿನ ಕ್ರಮವಹಿಸಲು ಅನುಮೋದನೆಗೆ ಮಂಡಿಸಿದೆ. | **ಈ ಬಗ್ಗೆ ಕುಲಾಧಿಪತಿಗಳಿಗೆ ಪತ್ರ ಬರೆದು ಮುಂದಿನ ಕ್ರಮವಹಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.** |
| ವಿಷಯ 02 | **ವಿಶ್ವವಿದ್ಯಾಲಯದ ಸಂಸ್ಕೃತ ಸಂಜೆ ಕಾಲೇಜನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2013–14ನೇ ಸಾಲಿನಿಂದ ಸಂಸ್ಕೃತ ಸಂಜೆ ಕಾಲೇಜುನ್ನು ಪ್ರಾರಂಭಿಸಿದ್ದು, 2015–16ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ಸ್ಥಳಾವಕಾಶದ ಕೊರತೆಯ ದೃಷ್ಟಿಯಿಂದ ಬಾಡಿಗೆ ಕಟ್ಟಡದಲ್ಲಿ ತರಗತಿಗಳನ್ನು ನಡೆಸಬೇಕಾಗಿದೆ. ಭಾರತೀಯ ಸಂಸ್ಕೃತಿ ವಿದ್ಯಾಪೀಠ, ಚಾಮರಾಜಪೇಟೆ, ಬೆಂಗಳೂರು – 18, ಇಲ್ಲಿ ತರಗತಿಗಳನ್ನು ನಡೆಸಲು ಮಾತುಕತೆ ನಡೆಸಲಾಗಿದೆ. ಸದರಿ ಸಂಸ್ಥೆಯೊಡನೆ ಬಾಡಿಗೆ ಕರಾರು ಪತ್ರಕ್ಕೆ ಸಹಿ ಹಾಕಬೇಕಿದೆ. ಮಾಸಿಕ ರೂ. 39,000/– ಬಾಡಿಗೆ ನೀಡಬೇಕಾಗುತ್ತದೆ. ವಾರ್ಷಿಕ ಅಂದಾಜು ರೂ. 5 ಲಕ್ಷಗಳ ಮೊತ್ತವನ್ನು ಪಾವತಿಸಬೇಕಾಗುತ್ತದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.<br>ಈ ವರ್ಷ ಸಂಜೆ ಕಾಲೇಜಿನ ಬಿ.ಎ 1ನೇ ಹಾಗೂ 2ನೇ ವರ್ಷದ ಪಾಠ್ಯಕ್ರಮವನ್ನು ಸಿ.ಬಿ.ಸಿ.ಎಸ್. ಪದ್ಧತಿಯನ್ನು ಅಳವಡಿಸಲಾಗುವುದು. ಹಾಗೂ ಎಂ.ಎ. ತರಗತಿಗಳನ್ನು ಪ್ರಾರಂಭಿಸಲಾಗುವುದು. ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ. | **ಈ ಬಗ್ಗೆ ಚರ್ಚಿಸಿ ವಿಶ್ವವಿದ್ಯಾಲಯದ ಈಗಿನ ಪರಿಸರದಲ್ಲಿ ಕಟ್ಟಡ ನಿರ್ಮಾಣವಾಗುವವರೆಗೆ ಈ ಬಾಡಿಗೆಯ ವ್ಯವಸ್ಥೆಯನ್ನು ಮಾಡಿಕೊಳ್ಳಲು ಅನುಮತಿ ನೀಡಲಾಯಿತು.** |
| ವಿಷಯ 03 | **ಧಾರವಾಡದಲ್ಲಿ ಹೊಸದಾಗಿ ಸಂಸ್ಕೃತ ಸಂಜೆ ಕಾಲೇಜನ್ನು ಪ್ರಾರಂಭಿಸುವ ಬಗೆಗೆ.**<br>ಧಾರವಾಡದಲ್ಲಿ ಸಂಸ್ಕೃತ ಸಂಜೆ ಕಾಲೇಜನ್ನು ಪ್ರಾರಂಭಿಸಲು ಪ್ರಸ್ತಾವಿಸಲಾಗಿದೆ. ಧಾರವಾಡದಲ್ಲಿ ವಿಶ್ವವಿದ್ಯಾಲಯದ ಅನುದಾನಿತ ಕಾಲೇಜಾದ ಸಿ.ಎಲ್.ವೈ. ಸಂಸ್ಕೃತ ಕಾಲೇಜು ಕಾರ್ಯನಿರ್ವಹಿಸುತ್ತಿದೆ. ಈ ಕಾಲೇಜಿನಲ್ಲಿ ಅಧ್ಯಾಪಕರ ಸಂಖ್ಯೆಯು ಹೆಚ್ಚಾಗಿದ್ದು, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುತ್ತದೆ. ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ಹಾಗೂ ಇರುವ ಅಧ್ಯಾಪಕರನ್ನು ಬಳಸಿಕೊಂಡು ಸಂಸ್ಕೃತ ಸಂಜೆ ಕಾಲೇಜನ್ನು ಪ್ರಾರಂಭಿಸಲಾಗುವುದು. ಇದೊಂದು ಒಳ್ಳೆಯ ಉಪಕ್ರಮವಾಗಿದ್ದು, ಪ್ರಾರಂಭದಲ್ಲಿ ಬಿ.ಎ. 1ನೇ ವರ್ಷ ಮತ್ತು ಸಾಧ್ಯವಾದರೆ ಎಂ.ಎ. 1ನೇ ವರ್ಷದ ತರಗತಿಗಳನ್ನು ಆರಂಭಿಸಲಾಗುವುದು. ಇದಕ್ಕಾಗಿ ಒಂದು ಬಾಡಿಗೆ ಕಟ್ಟಡದ ವ್ಯವಸ್ಥೆ ಮಾಡಬೇಕಾಗಿದೆ. ಇದಕ್ಕೆ ತಗಲುವ ವೆಚ್ಚವನ್ನು ವಿಶ್ವವಿದ್ಯಾಲಯವು ಭರಿಸಬೇಕಾಗುತ್ತದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ. | **ಧಾರವಾಡದಲ್ಲಿ ಸಂಸ್ಕೃತ ಸಂಜೆ ಕಾಲೇಜನ್ನು ತೆರೆಯುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸಭೆಯು ತನ್ನ ಅನುಮೋದನೆ ನೀಡಿತು.** |
| ವಿಷಯ 04 | **ವಿಶ್ವವಿದ್ಯಾಲಯದ ಅಧೀನವಾದ ಕಾಲೇಜುಗಳ ಅಧ್ಯಾಪಕರಿಗೆ ಹಾಗೂ ನಿರ್ದೇಶನಾಲಯದ ಅಧೀನವಾದ ಪಾಠಶಾಲಾ ಶಿಕ್ಷಕರಿಗೆ ತರಬೇತಿ ಶಿಬಿರಗಳನ್ನು ನಡೆಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನವಾದ ಸಂಸ್ಕೃತ ಕಾಲೇಜುಗಳ ಅಧ್ಯಾಪಕರಿಗೆ ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಧೀನವಾದ ಸಂಸ್ಕೃತ ಪಾಠಶಾಲೆಗಳಲ್ಲಿ ಪ್ರಥಮಾ, ಕಾವ್ಯ, ಸಾಹಿತ್ಯ ತರಗತಿಗಳಿಗೆ ಬೋಧಿಸುವ ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೆ ಹಾಗೂ ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ತರಗತಿಗಳನ್ನು | **ಸಭೆಯು ಒಪ್ಪಿಗೆಯನ್ನು ನೀಡಿತು.** |

| | | |
|---|---|---|
| | ನಡೆಸುವ ಅಧ್ಯಾಪಕರಿಗೆ ತರಬೇತಿ ಶಿಬಿರಗಳನ್ನು ವಿವಿಧ ಹಂತಗಳಲ್ಲಿ ಏರ್ಪಡಿಸಬೇಕಿದೆ. ಸುಮಾರು 700 (150 + 600) ಅಧ್ಯಾಪಕರು ಇದರಲ್ಲಿ ಭಾಗವಹಿಸಲಿದ್ದಾರೆ. ಇವರಲ್ಲಿ ಅನೇಕರು ಹೊಸದಾಗಿ ನೇಮಕಗೊಂಡಿದ್ದಾರೆ. ಅಂದಾಜು ರೂ 6 ಲಕ್ಷ ವೆಚ್ಚವಾಗಬಹುದು. ಸಭೆಯ ಅನುಮೋದನೆಗಾಗಿ ಮಂಡಿಸಿದೆ. | |
| ವಿಷಯ 05 | **ವಿಶ್ವವಿದ್ಯಾಲಯದ ಬೆಂಗಳೂರು ಆಡಳಿತ ಕಛೇರಿಯ ಜಮೀನಿನ ಹಸ್ತಾಂತರದ ಬಗೆಗೆ ಹಾಗೂ ವಿಶ್ವವಿದ್ಯಾಲಯದ ಪ್ರಾಂಗಣದಲ್ಲಿ ಉದ್ಯಾನವನವನ್ನು ನಿರ್ಮಿಸುವ ಬಗೆಗೆ.**<br>ವಿಶ್ವವಿದ್ಯಾಲಯದ ಬೆಂಗಳೂರು ಆಡಳಿತ ಕಛೇರಿಯ ಜಮೀನಿನ ಹಸ್ತಾಂತರದ ಪ್ರಕ್ರಿಯೆಯು ಬಿ.ಬಿ.ಎಂ.ಪಿ ಸಂಸ್ಥೆಯಲ್ಲಿ ಕೊನೆಯ ಹಂತದಲ್ಲಿದ್ದು, ವಿಶ್ವವಿದ್ಯಾಲಯವು ಖಾತಾ ಪ್ರಮಾಣಪತ್ರವನ್ನು ಪಡೆಯಬೇಕಿದೆ. ಇದಕ್ಕಾಗಿ ಜಮೀನಿನ ಒಟ್ಟು ಮೌಲ್ಯಕ್ಕೆ ಕಟ್ಟಬೇಕಾದ ತೆರಿಗೆಯ 20% ಮೊತ್ತವನ್ನು ವಿಶ್ವವಿದ್ಯಾಲಯವು ಪಾವತಿಸಬೇಕಾಗುತ್ತದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.<br>ವಿಶ್ವವಿದ್ಯಾಲಯಕ್ಕೆ ಅನೇಕ ಗಣ್ಯರು ಹಾಗೂ ಅತಿಥಿಗಳು ಆಗಾಗ್ಗೆ ಭೇಟಿ ನೀಡುತ್ತಾರೆ. ವಿಶ್ವವಿದ್ಯಾಲಯದ ಪ್ರಾಂಗಣವನ್ನು ಸ್ವಚ್ಛವಾಗಿರಿಸುವ ಸಂಬಂಧ ಹಾಗೂ ಪ್ರಾಂಗಣದಲ್ಲಿ ಉದ್ಯಾನವನವನ್ನು ನಿರ್ಮಿಸಬಹುದಾಗಿದೆ. ಈ ಜಾಗದಲ್ಲಿ ಹುಲ್ಲುಗಾವಲು, ತೋಟಗಾರಿಕೆ ಇವುಗಳನ್ನು ನಡೆಸುವ ಸಂಬಂಧ ಅಂದಾಜು 2.5 ಲಕ್ಷ ವೆಚ್ಚವಾಗಬಹುದು. ಸಭೆಯ ಅನುಮೋದನೆಗಾಗಿ ಮಂಡಿಸಿದೆ. | **ಸಭೆಯು ಒಪ್ಪಿಗೆಯನ್ನು ನೀಡಿತು.** |
| ವಿಷಯ 06 | **ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗೆ ಸಮವಸ್ತ್ರ ನೀಡುವ ಬಗೆಗೆ.**<br>ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳಿಗೆ ಸಮವಸ್ತ್ರ ನೀಡುವ ಸಂಬಂಧ ಈ ಕೆಳಕಂಡಂತೆ ಪ್ರಸ್ತಾವಿಸಲಾಗಿದೆ. ಗ್ರೂಪ್ 'ಡಿ' ನೌಕಕರಾದ ಜವಾನರಿಗೆ ಪುರುಷರಿಗೆ ನೀಲಿ ಬಣ್ಣದ ಸಮವಸ್ತ್ರ (ಪ್ಯಾಂಟ್, ಶರ್ಟ್); ಮಹಿಳೆಯರಿಗೆ ನೀಲಿ ಬಣ್ಣದ ಸಮವಸ್ತ್ರ (ಸೀರೆ ಅಥವಾ ಚೂಡಿದಾರ್); ಗ್ರೂಪ್ 'ಡಿ' ನೌಕಕರಾದ ಕಾವಲುಗಾರರಿಗೆ ಖಾಕಿ ಸಮವಸ್ತ್ರ (ಪ್ಯಾಂಟ್, ಶರ್ಟ್) ಹಾಗೂ ವಾಹನ ಚಾಲಕರಿಗೆ ಬಿಳಿ ಬಣ್ಣದ ಸಮವಸ್ತ್ರ (ಪ್ಯಾಂಟ್, ಶರ್ಟ್) ಮತ್ತು ಒಂದು ಜೊತೆ ಕಪ್ಪು ಬೂಟ್–ಸಾಕ್ಸ್. ವರ್ಷಕ್ಕೆ ಎರಡು ಜೊತೆ ಸಮವಸ್ತ್ರ ನೀಡುವುದು ಹಾಗೂ ನಿಯಮಾನುಸಾರ ಸಮವಸ್ತ್ರ ಸ್ವಚ್ಛತಾ ಭತ್ಯೆ ಪಾವತಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | **ವಿಶ್ವವಿದ್ಯಾಲಯದ ಬೋಧಕೇತರ 'ಡಿ' ವರ್ಗದ ಸಿಬ್ಬಂದಿಗಳಿಗೆ ಎರಡು ಜೊತೆ ಸಮವಸ್ತ್ರ; ವಾಹನ ಚಾಲಕರಿಗೆ ಎರಡು ಜೊತೆ ಸಮವಸ್ತ್ರ ಮತ್ತು ಒಂದು ಜೊತೆ ಕಪ್ಪುಬಣ್ಣದ ಬೂಟು ನೀಡಲು ಹಾಗೂ ನಿಯಮಾನುಸಾರ ಸಮವಸ್ತ್ರ ಸ್ವಚ್ಛತಾಭತ್ಯೆಯನ್ನು ಪಾವತಿಸಲು ಸಭೆಯು ಅನುಮೋದನೆಯನ್ನು ನೀಡಿತು.** |
| ವಿಷಯ 07 | **2015–16ನೇ ಸಾಲಿನಲ್ಲಿ ಸಂಸ್ಕೃತೋತ್ಸವ ಹಾಗೂ ರೂಪಕೋತ್ಸವ ನಡೆಸುವ ಬಗೆಗೆ.**<br>ಕಳೆದ ವರ್ಷದಂತೆ ಈ ವರ್ಷವೂ ಕೂಡ ವಿಶ್ವವಿದ್ಯಾಲಯವು ಸಂಸ್ಕೃತೋತ್ಸವ ಹಾಗೂ ರೂಪಕೋತ್ಸವ ನಡೆಸುವ ಬಗೆಗೆ ಪ್ರಸ್ತಾವಿಸಲಾಗಿದೆ. ಇದಕ್ಕಾಗಿ 5 ಲಕ್ಷ ರೂ.ಗಳ ಅಂದಾಜು ವೆಚ್ಚಕ್ಕಾಗಿ ಅನುಮೋದನೆ ಕೋರಿ ಸಭೆಗೆ ಮಂಡಿಸಿದೆ. | **ಸಭೆಯು ಒಪ್ಪಿಗೆಯನ್ನು ನೀಡಿತು. ಆದರೆ, ವಿಶ್ವವಿದ್ಯಾಲಯದ ಈ ಎಲ್ಲ ಕಾರ್ಯಕ್ರಮಗಳಿಗೆ ಅಂದಾಜು ವೆಚ್ಚವನ್ನು ಮುಂದಿನ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕೆಂದು ಸದಸ್ಯರು ಸೂಚಿಸಿದರು. ಅಧ್ಯಕ್ಷರು ಒಪ್ಪಿಗೆ ನೀಡಿದರು.** |
| ವಿಷಯ 08 | **ಚಿತ್ರದುರ್ಗದ ಹಿಂದುಳಿದ ವರ್ಗದ ಆಡಳಿತದಲ್ಲಿರುವ ಪೂರ್ಣಪ್ರಜ್ಞ ಸಂಸ್ಕೃತ ಕಾಲೇಜಿನ ಪುನಾರಂಭದ ಬಗೆಗೆ.**<br>ಶ್ರೀ ಪೂರ್ಣಪ್ರಜ್ಞ ಎಜುಕೇಶನ್ ಸೊಸೈಟಿ (ರಿ.) ಸಂಸ್ಥೆಯ ಪೂರ್ಣಪ್ರಜ್ಞ ಸಂಸ್ಕೃತ ಕಾಲೇಜಿನ ಪುನಾರಂಭದ ಬಗೆಗೆ ಸದರಿ ಕಾಲೇಜಿಗೆ ಭೇಟಿ ನೀಡಿ, ಪರಿಶೀಲಿಸಿ ವರದಿಯನ್ನು ನೀಡುವಂತೆ ತ್ರಿಸದಸ್ಯ ಸಮಿತಿಯೊಂದನ್ನು ರಚಿಸಲಾಗಿತ್ತು.<br>ಪ್ರೊ. ಎಂ.ಕೆ. ಶ್ರೀಧರ್, ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ –ಅಧ್ಯಕ್ಷರು<br>ಡಾ. ಆರ್. ವೇಣುಗೋಪಾಲ್, ಪ್ರಶಿಕ್ಷಣ ಪರಿಷತ್ ಸದಸ್ಯರು, ಕ.ಸಂ.ವಿ. –ಸದಸ್ಯರು<br>ವಿದ್ವಾನ್ ಗಣಪತಿ ಶಾಸ್ತ್ರಿ, ಪ್ರಾಚಾರ್ಯರು, ಕಬೀರಾನಂದ ಸಂಸ್ಕೃತ ಕಾಲೇಜು, ಚಿತ್ರದುರ್ಗ –ಸದಸ್ಯ ಸಂಚಾಲಕರು<br>ಈ ತ್ರಿಸದಸ್ಯ ಸಮಿತಿಯು ನೀಡಿರುವ ವರದಿ ಹಾಗೂ ಶಿಫಾರಸ್ಸನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | **ತ್ರಿಸದಸ್ಯ ಸಮಿತಿ ವರದಿಯ ಶಿಫಾರಸ್ಸನ್ನು ಸಭೆಯು ಅಂಗೀಕರಿಸಿ, ಸರ್ಕಾರದ ಆದೇಶದ ಅನುಸಾರ ಕ್ರಮವಹಿಸಲು ಒಪ್ಪಿಗೆಯನ್ನು ನೀಡಿತು.** |

**ಪ್ರೊ. ಎಂ.ಕೆ. ಶ್ರೀಧರ್**
ಸದಸ್ಯ ಕಾರ್ಯದರ್ಶಿ

**ಪ್ರೊ. ಶ್ರೀನಿವಾಸ ವರಖೇಡಿ**
ಅಧ್ಯಕ್ಷರು